1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 08

CW- 03

ಪ್ರ. ಬೋ. ದಿನಾಂಕಃ 08-10-2024

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಲೋಹಿತ್ |
| ತಂದೆ/ಗಂಡನ ಹೆಸರು | : | ಶಂಕ್ರಪ್ಪ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಗ್ಯಾರೇಜ್ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ಕಳೆದ 10 ವರ್ಷದಿಂದ ದಾವಣಗೆರೆಯಲ್ಲಿ ಗ್ಯಾರೇಜ್ ಕೆಲಸ ಮಾಡುತ್ತಿದ್ದೇನೆ. ಚಾಸಾ-1, 2, 6 ಮತ್ತು 12 ಗೊತ್ತಿದ್ದಾರೆ ಹಾಗೂ ಆರೋಪಿತರು ಗೊತ್ತಿದ್ದಾರೆ. ಮೃತ ಕುಮಾರ್ ನನಗೆ ಗೊತ್ತು. ಆಸ್ತಿ ಸಲುವಾಗಿ ಆತನ ಕೊಲೆಯಾಗಿದೆ.

ದಿ.15-05-2023 ರಂದು ನನ್ನನ್ನು ಮತ್ತು ಚಾಸಾ-2 ರವರನ್ನು ಪೊಲೀಸರು ಮಹಜರ್ ಸಾಕ್ಷಿಯಾಗಿ ಕರೆದಿದ್ದರು. ಹರಿಹರ ಪೊಲೀಸ್ ಠಾಣೆಗೆ ನಾವು ಹೋಗಿದ್ದೇವು. ಆರೋಪಿತರನ್ನು ಪೊಲೀಸರು ಪರಿಚಯಿಸಿದರು. ಆಗ ಆರೋಪಿತರು 14 ನೇ ತಾರೀಖು ರಾತ್ರಿ 10-30 ಗಂಟೆಗೆ ಕುಮಾರನ ಮನೆ ಹತ್ತಿರ ಹಲ್ಲೆ ಮಾಡಿದ್ದೇವು ಎಂದು ತಿಳಿಸಿದರು. ಆ ನಂತರ ಆರೋಪಿ 1 ಮತ್ತು 2 ಇವರು ಆಸ್ಪತ್ರೆಗೆ ಹೋಗಿದ್ದರು, ಆಗ ಫಕ್ಕಿರಪ್ಪ ಮತ್ತು ಕುಮಾರ ಇವರು ಆಸ್ಪತ್ರೆಗೆ ಹೋದಾಗ ಆರೋಪಿಪತರು ಚಾಕುವಿನಿಂದ ಫಕ್ಕಿರಪ್ಪ ಮತ್ತು ಕುಮಾರನಿಗೆ ಹಲ್ಲೆ ಮಾಡಿ, ಕುಮಾರನ ಕೊಲೆ ಮಾಡಿದ್ದೇವೆ ಎಂದು ಹೇಳಿದರು.

ನಾವು ಕೊಲೆ ಮಾಡಿದ ಸಮಯದಲ್ಲಿ ಹಾಕಿದ್ದ ಬಟ್ಟೆಗಳನ್ನು ಪೊಲೀಸ್ ಠಾಣೆಯಲ್ಲಿ ಆರೋಪಿತರು ಹಾಜರುಪಡಿಸಿದರು. 1 ನೇ ಆರೋಪಿ ಟೀಶರ್ಟ್ , 2 ನೇ ಆರೋಪಿ ಶರ್ಟ್ ಹಾಜರುಪಡಿಸಿದರು, ಪೊಲೀಸರು ಬಿಳಿ ಕವರ್ ನಲ್ಲಿ ಹಾಕಿ ಪ್ಯಾಕ್ ಮಾಡಿ

ಬಟ್ಟೆ ಅಮಾನತ್ತು ಮಹಜರ್ ಮಾಡಿದರು. ಸದರಿ ಮಹಜರ್ ನೋಡುತ್ತಿದ್ದು , ಅದನ್ನು ನಿಪಿ.20 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋ ನೋಡುತ್ತಿದ್ದು, ಅದನ್ನು ನಿಪಿ.21 ಎಂದು ಗುರುತಿಸಲಾಯಿತು. ಆ ದಿನ ಪೊಲೀಸರು ಅಮಾತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವು ನ್ಯಾಯಾಲಯದ ಮುಂದೆ ಇದ್ದು , ಈಗಾಗಲೇ ಮು.ಮಾ.4 ಮತ್ತು 5 ಎಂದು ಈಗಾಗಲೇ ಗುರುತಿಸಲಾಗಿದೆ.

ನಂತರ ಚಾಕುವನ್ನು ಇಟ್ಟಿದ್ದೇವೆ , ಅದನ್ನು ತೋರಿಸುತ್ತೇವೆ ಅಂತಾ ಸರ್ಕಾರಿ ಆಸ್ಪತ್ರೆ ಹತ್ತಿರ ಕರೆದುಕೊಂಡು ಹೋದರು. ಆಸ್ಪತ್ರೆಯ ಹತ್ತಿರ ಇರುವ ಕಾಡು ಜಾತಿಯ ಮರದ ಹತ್ತಿರ ಚಾಕುವನ್ನು ಬೀಸಾಕಿದ್ದನ್ನು ತೋರಿಸಿದರು, ಹಾಗೂ 1 ನೇ ಆರೋಪಿ ಸದರಿ ಚಾಕುವನ್ನು ಅಲ್ಲಿಂದ ತೆಗೆದು ಪೊಲೀಸರಿಗೆ ತೋರಿಸಿ ಕೊಟ್ಟ, ಆಗ ಪೊಲೀಸರು ಬಿಳಿ ಕವರ್ ನಲ್ಲಿ ಹಾಕಿ ಮಹಜರ್ ಮಾಡಿದರು. ಆ ದಿನ ಪೊಲೀಸರ ವ್ಯಾನಿನಲ್ಲಿ ಆರೋಪಿತರು ಕರೆದುಕೊಂಡು ಹೋಗಿದ್ದರು. ಆ ದಿನ ಮಾಡಿದ ಮಹಜರ್ ನೋಡುತ್ತಿದ್ದು, ಅದನ್ನು ನಿಪಿ.22 ಎಂದು , ನಿಪಿ.22(ಎ) ನನ್ನ ಸಹಿ ಗುರುತಿಸಲಾಯಿತು. ಆಗ ತೆಗೆಸಿದ ಫೋಟೋ ನೋಡತ್ತಿದ್ದು , ಅದನ್ನು ನಿಪಿ.23 ಎಂದು ಗುರುತಿಸಲಾಯಿತು. ಸದರಿ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಚಾಕು ನ್ಯಾಯಾಲಯದ ಮುಂದೆ ಇದ್ದು , ಅದನ್ನು ಮು.ಮಾ.3 ಎಂದು ಈಗಾಗಲೇ ಗುರುತಿಸಲಾಗಿದೆ. ಮು.ಮಾ.3 ರಿಂದ 5 ರ ಶೀಲ್ ಕವರ್ ಮೇಲೆ ನನ್ನ ರುಜು ಇದೆ. ಆ ದಿನ ಬಟ್ಟೆಯನ್ನು ಹಾಜರುಪಡಿಸಿದ ಹಾಗೂ ಚಾಕುವನ್ನು ಹಾಜರುಪಡಿಸಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಆರೋಪಿತರನ್ನು ವಿಸಿ ಮೂಲಕ ಹಾಜರುಪಡಿಸಿದ್ದು , ಸಾಕ್ಷಿ ಅವರನ್ನು ನೋಡಿ ಅವರೇ ಇರುತ್ತಾರೆ ಎಂದು ಉತ್ತರಿಸಿರುತ್ತಾರೆ.

ಪಾಟೀಸವಾಲುಃ- 1 ಮತ್ತು 2 ನೇ ಆರೊಪಿತರಪರ ಶ್ರೀ ಪಿ.ಬಿ ವಕೀಲರಿಂದ.

ಪೊಲೀಸರು ಮಹಜರ್ ಗೆ ಬರಲು ಲಿಖಿತವಾಗಿ ನೋಟೀಸು ಕೊಟ್ಟಿಲ್ಲ , ಆದರೆ ಫೋನ್ ಮುಖಾಂತರ ಹೇಳಿದ್ದರು. ಹರಿಹರ ಪೊಲೀಸರು ಬೆಳಿಗ್ಗೆ 7-00 ಗಂಟೆಗೆ ನನಗೆ ಫೋನ್ ಮಾಡಿದ್ದರು. ನನ್ನದು ಮತ್ತು ಚಾಸಾ-2 ಇಬ್ಬರ ಫೋನ್ ನಂಬರ್ ಗಳು ಹರಿಹರ ಪೊಲೀಸ್ ಠಾಣೆಯ ಎರಡು ಮೂರು ಪೊಲೀಸರ ಬಳಿ ಇದೆ. ಪೊಲೀಸರು ಆಗಾಗ ಮಹಜರ್ ಇದ್ದಾಗ ನನಗೆ ಫೋನ್ ಮಾಡುತ್ತಾರೆ. ನಾನು ಮತ್ತು ಚಾಸಾ-2

ಇಬ್ಬರೂ ಜೊತೆಯಲ್ಲಿ ಪೊಲೀಸ್ ಠಾಣೆಗೆ ಹೋಗಿದ್ದೇವು. ಚಾಸಾ–2 ನಾಗರಾಜನಿಗೆ ಮಹಜರ್ ಗೆ ಬರಬೇಕು ಎಂದು ನೋಟೀಸು ಕೊಟ್ಟಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಚಾಸಾ–2 ಇವರಿಗೆ ಪೊಲೀಸರು ಫೋನ್ ಮಾಡಿದ್ದ ಬಗ್ಗೆ ಆತನನ್ನು ಕೇಳಿ ತಿಳಿದುಕೊಂಡಿಲ್ಲ. ನಾನು ಮತ್ತು ಚಾಸಾ–2 ಪೊಲೀಸ್ ಠಾಣೆಗೆ ಹೊಗುವ ಪೂರ್ವದಲ್ಲಿ ಆರೋಪಿತರು ಠಾಣೆಯಲ್ಲಿದ್ದರು. ಮು.ಮಾ.4 ಮತ್ತು 5 ಬಟ್ಟೆ ನಾವು ಠ್ಾಣೆಗೆ ಹೋದಾಗ ಸದರಿ ಬಟ್ಟೆಗಳು ಆರೋಪಿತರ ಕೈಯಲ್ಲಿದ್ದವು.

ಮಹಜರ್ ನಲ್ಲಿ ಪೊಲೀಸರು –ಆರೋಪಿತರು ಮೈಮೇಲಿನ ಬಟ್ಟೆಗಳನ್ನು ಪಡೆದು ನೋಡಲಾಗಿ ಆರೋಪಿ –1 ಮತ್ತು 2 ಇವರು ಮೈಮೇಲೆ ಹಳದಿ ಕಪ್ಪು ಟೀಶರ್ಟ್ ಮತ್ತು ಶರ್ಟ್ ಇದ್ದವು. ನಾವು ಹೋಗುವ ಪೂರ್ವದಲ್ಲಿ ಪೊಲೀಸರು ಆರೋಪಿತರ ಮೈಮೇಲಿಂದ ಬಟ್ಟೆಗಳನ್ನು ತೆಗೆಸಿಟ್ಟಿದ್ದರು. ನನ್ನ ಸಮಕ್ಷಮ ಆರೋಪಿತರ ಮೈಮೇಲಿನ ಬಟ್ಟೆಗಳನ್ನು ತೆಗೆದಿಲ್ಲ.

ಮಹಜರ್ ಬರೆದ ಪೊಲೀಸರ ಹೆಸರು ಗೊತ್ತಿಲ್ಲ. ಯಾರು ಹೇಳಿ ಬರೆಸಿರುತ್ತಾರೆ ಅಂತಾ ಅವರ ಹೆಸರು ಗೊತ್ತಿಲ್ಲ. ಠಾಣೆಯಲ್ಲಿ ನಮ್ಮನ್ನು ಕೂಡಿಸಿ ಬೆರಳಚ್ಚು ಮಾಡಿಸಿರುತ್ತಾರೆ. ಟೈಪ್ ಮಾಡಲು ಯಾರು ಮಾಹಿತಿ ಕೊಟ್ಟಿರುತ್ತಾರೆ ಎನ್ನುವುದು ಗೊತ್ತಿಲ್ಲ.

ಮು.ಮಾ.4 ಮತ್ತು 5 ರಲ್ಲಿ ಕೇಸರಿ ಬಣ್ಣದ ಶರ್ಟ್ ಇರುವುದಿಲ್ಲ. ಆರೋಪಿತರಿಗೆ ಬೇರೆ ಬಟ್ಟೆಗಳನ್ನು ಯಾರು , ಎಲ್ಲಿಂದ ತಂದು ಕೊಟ್ಟರು ಗೊತ್ತಿಲ್ಲ. ನಾವು ಹೋಗುವ ಪೂರ್ವದಲ್ಲಿ ಆರೋಪಿತರು ಬೇರೆ ಬಟ್ಟೆಗಳನ್ನು ಹಾಕಿಕೊಂಡಿದ್ದರು. ಆ ದಿನ 1 ನೇ ಆರೋಪಿ ಜೀನ್ಸ ಪ್ಯಾಂಟ್ ಹಾಕಿದ್ದರು. ಆ ಪ್ಯಾಂಟನ್ನು ಪೊಲೀಸರು ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡಿಲ್ಲ. ಕೇವಲ ಶರ್ಟನ್ನು ಮಾತ್ರ ಮಾಡಿರುತ್ತಾರೆ. ಪ್ಯಾಂಟಿನ ಬಗ್ಗೆ ಮಹಜರ್ ನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಮಹಜರ್ ನಲ್ಲಿ ಏನು ಬೆರಳಚ್ಚು ಮಾಡಿದ್ದಾರೆ ಎಂದು ನಿಖರವಾಗಿ ಗೊತ್ತಿಲ್ಲ. ನಾನು ಮತ್ತು ಚಾಸಾ–2 ನಾಗರಾಜ್ ಇಬ್ಬರೂ ಸಹಿ ಮಾಡಿದ್ದು , ಬೇರೆ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ನಮ್ಮ ಸಮಕ್ಷಮ ಪೊಲೀಸ್ ಠಾಣೆಯಲ್ಲಿ ಮು.ಮಾ.4 , 5 ಬಟ್ಟೆ ಹಾಜರುಪಡಿಸಿಲ್ಲ , ನಿಪಿ.20 ಮಹಜರ್ ಮಾಡಿಲ್ಲದಿದ್ದರೂ ಸಹ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

ಆಸ್ಪತ್ರೆ ಹತ್ತಿರ ನಾನು, ಚಾಸಾ–2 ನಾಗರಾಜ , ಪೊಲೀಸರು ಮತ್ತು ಆರೋಪಿತರು ಹೋದೆವು. ಎರಡು ಜನ ಪೊಲೀಸರು ಇದ್ದರು. ಪೊಲೀಸರ ಹೆಸರು, ಅವರ ಹುದ್ದೆ ನನಗೆ ಗೊತ್ತಿಲ್ಲ. ಆಗ 1 ನೇ ಆರೋಪಿ ಹೋಗುತ್ತಿರುವ ಜೀಪನ್ನು ಇಲ್ಲೇ ನಿಲ್ಲಿಸಿರಿ ಎಂದು ಹೇಳಿದ. ಆಗ ಅಥವಾ ಅದಕ್ಕು ಪೂರ್ವದಲ್ಲಿ ಆಸ್ಪತ್ರೆಯ ವೈದ್ಯರಾಗಲಿ ಸಿಬ್ಬಂದಿಗಳಾಗಲಿ ಯಾರೂ ಭೇಟ್ಟಿಯಾಗಲಿಲ್ಲ. ಆಸ್ಪತ್ರೆಯ ಮುಖ್ಯ ದ್ವಾರದಿಂದ ಮುಖ್ಯ ರಸ್ತೆ ಅರ್ಧ ಕಿಮೀ ದೂರದಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ಆಸ್ಪತ್ರೆಯ ಮುಂಭಾಗ ವಿಶಾಲವಾದ ಕಂಪೌಂಡ್ ಗೋಡೆ ಇದೆ. ಕಂಪೌಂಡ್ ಮತ್ತು ಆಸ್ಪತ್ರೆಯ ಮಧ್ಯ ವಿಶಾಲವಾದ ಜಾಗ ಮತ್ತು ಗಿಡಮರಗಳು ಇವೆ. ಆಸ್ಪತ್ರೆಯ ಮುಖ್ಯ ದ್ವಾರದಿಂದ ಚಾಕುವನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ಅಂತಾ ಹೇಳಿದ ಸ್ಥಳ ಎಷ್ಟು ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಚಾಕು ತೆಗೆದುಕೊಟ್ಟಿರುತ್ತಾನೆ ಎಂದು ಹೇಳುವ ಸ್ಥಳದಿಂದ ಸಾರ್ವಜನಿಕ ಮುಖ್ಯ ರಸ್ತೆ ಎಷ್ಟು ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ.

ಚಾಕುವನ್ನು ಅಮಾನತ್ತುಪಡಿಸಿಕೊಳ್ಳುವ ಪೂರ್ದಲ್ಲಿ ಪೊಲೀಸರನ್ನು ವೈದ್ಯರು ಸಂಪರ್ಕಿಸಿಲ್ಲ. ಆ ಸ್ಥಳದಲ್ಲಿ ಚಾಕುವನ್ನು ಆರೋಪಿ ಎಷ್ಟು ಗಂಟೆಗೆ ಹಾಕಿದ್ದ ಎಂದು ವಿಚಾರಣೆ ಮಾಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಚಾಕುವನ್ನು ತೋರಿಸಿದ ಸ್ಥಳದಲ್ಲಿ ಬರವಣಿಗೆ ಮಾಡಿಲ್ಲ. ನಿಪಿ.22 ಮಹಜರ್ ಎಲ್ಲಿ ಮಾಡಿರುತ್ತಾರೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ನಾನು ಮತ್ತು ನಾಗರಾಜ್ ಇಬ್ಬರು ಸಹಿ ಮಾಡಿದ್ದು ಮಾತ್ರ ಗೊತ್ತು. ನಮ್ಮನ್ನು ಹೊರುತುಪಡಿಸಿ ಬೇರೆ ಯಾರು ಸಹಿ ಮಾಡಿದ್ದು ಎಂದು ನನಗೆ ಗೊತ್ತಿಲ್ಲ. ಆರೋಪಿ ಮು.ಮಾ.3 ಚಾಕು ತೋರಿಸಿಲ್ಲ , ಪೊಲೀಸರು ಅದನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ನಿಪಿ.22 ಮಹಜರ್ ಮಾಡದಿದ್ದರೂ ಸಹ ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಆಸ್ತಿ ಸಲುವಾಗಿ ಜಗಳವಾಗಿದೆ ಎನ್ನುವುದು ಮಾತ್ರ ಗೊತ್ತು. ಆಸ್ತಿ ಯಾವುದು, ಯಾತಕ್ಕಾಗಿ ಜಗಳ ಆಗಿದೆ ಗೊತ್ತಿಲ್ಲ. ಕೊರ್ಟಿನಲ್ಲಿ ಕೇಸು ಇರುವ ವಿಚಾರ ನನಗೆ ಗೊತ್ತಿಲ್ಲ. ಆರೋಪಿತರು ಠಾಣೆಯಲ್ಲಿ ಹೇಳಿದ್ದನ್ನು ಪೊಲೀಸರು ನನ್ನ ಸಮಕ್ಷಮ ಬರವಣಿಗೆ ಮಾಡಿಕೊಂಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ವಿಚಾರಣೆ ಮಾಡಿದ ಪೊಲೀಸರ ಹೆಸರು ಗೊತ್ತಿಲ್ಲ. ಆಸ್ತಿ ಸಂಬಂಧವಾಗಿ ಕೊಲೆಯಾಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಎನ್ನುವುದು ಸರಿಯಲ್ಲ. ಆರೋಪಿತರು ಮೊದಲು ಮನೆ ಹತ್ತಿರ ಗಲಾಟೆಯಾಗಿತ್ತು , ನಂತರ ಆಸ್ಪತ್ರೆಗೆ ಹೋದೆವು, ಅಲ್ಲಿ ಹೋಗಿ ನಾವು ಕೊಲೆ ಮಾಡಿದೆವು ಎಂದು ಹೇಳಿದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಈ ಕೇಸಿನಲ್ಲಿ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಫೋಟೋಗಳನ್ನು ಈ ಕೇಸಿಗಾಗಿ ಸೃಷ್ಟಿಸಿರುತ್ತಾರೆ ಎನ್ನುವುದು ಸುಳ್ಳು. ಸ್ಥಳದಲ್ಲಿ ತೆಗೆದ ಫೋಟೊಗಳಾಗಿರುವುದಿಲ್ಲ ಎನ್ನುವುದು ಸುಳ್ಳು.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.